
ಹುದುಗಿಕೊಂಡಿರುತ್ತದೆ. ಇದ್ದುದನ್ನು ಇದ್ದ ಹಾಗೆ ಹೇಳಿದರೆ ಇವರಿಗೇನು ನಷ್ಟ? ಕೊಲೆಯೇಕೆ ಆಗಿದೆ, ಯಾರು ಕೊಲೆಗಾರರು, ಕೊಲೆಯ ಹಿಂದಿನ ಉದ್ದೇಶಗಳನ್ನು ಕಂಡುಹಿಡಿಯುವಲ್ಲಿ ಕೆಲವು ಸುಳುಹುಗಳು ದೊರಕಬಹುದು. ಎಲ್ಲರೂ ತಾವು ಸುರಕ್ಷಿತವಾಗಿದ್ದರೆ ಸಾಕು ಎನ್ನುವ ಮನೋಭಾವ ಹೊಂದಿದ್ದಾರೆ.

ಮಧ್ಯಾಹ್ನ ಮೂರು ಗಂಟೆಯ ಸುಮಾರು ಹೊಟೇಲಿನಲ್ಲಿ ಅಷ್ಟೇನೂ ಜನ ಇರುವುದಿಲ್ಲ. ಒಂದೊಂದು ಸಲ ಅನಸವ್ವ, ದೇವಣ್ಣನನ್ನು ಬಿಟ್ಟು ಯಾರೂ ಇರುವುದಿಲ್ಲ. ಅವತ್ತು ಸಹ ಹಾಗೆಯೇ ಆಗಿರಬೇಕು. ಆ ಹೊತ್ತಿನಲ್ಲಿ ಮೂವರು ಮಾತ್ರ ಇದ್ದರೆಂದು ಹೇಳುತ್ತಾರೆ. ಏನೋ ಬಾಯಿ ಕೇಳುತ್ತಿತ್ತು. ದೇವಪ್ಪ ಮತ್ತು ಅನಸೂಯೆಯರ ಕಲಹ ಇದ್ದಿದ್ದೇ ಎಂದು ಜನರ ಗಮನ ಆ ಕಡೆ ಹೋಗಲಿಲ್ಲ. ಆದರೆ ಯಾವಾಗ ಅನಸವ್ವ ರಸ್ತೆಗೆ ಬಂದು ಚಿಟ್ಟಚಿಟ್ಟನೆ ಚೀರತೊಡಗಿದಳೋ, ಏನೋ ಅನಾಹುತ ಸಂಭವಿಸಿದೆಯೆಂದು ಒಂದಿಬ್ಬರು ಓಡಿಬಂದರು. ಅನಸವ್ವ ಹೇಳಿದ್ದಿಷ್ಟು: 'ತನಗೇನೂ ಗೊತ್ತಿಲ್ಲ. ತಾನು ಹೊಟೇಲ್ ಒಳಗಡೆ ಪಾತ್ರೆ ತೊಳೆಯುತ್ತಿದ್ದೆ. ಯಾರೋ ಚೀರಿದ ಹಾಗಾಯಿತು. ಏನಾಯಿತೆಂದು ನೋಡಲು ಬಂದರೆ ದುರ್ಗಪ್ಪನ ತಲೆಯಿಂದ ರಕ್ತ ಬರುತ್ತಿತ್ತು ಮತ್ತು ಅವನ ಕೈಯಲ್ಲಿ ಕುಡುಗೋಲು ಇತ್ತು. ಕಂಡಕ್ಟರ್ ಅಲ್ಲಿಯೇ ಕೆಳಗೆ ಬಿದ್ದಿದ್ದ. ತನಗೆ ಭಯ ಮತ್ತು ದಿಗ್ಭ್ರಮೆ ಉಂಟಾಗಿ ಹೊರಗೆ ಬಂದು ಜೋರಾಗಿ ಕೂಗತೊಡಗಿದೆ. ಅಲ್ಲಿಯೆ ಪ್ರಜ್ಞೆ ತಪ್ಪಿ ಬಿದ್ದೆ. ಕೆಲವು ಹೆಂಗಸರು ಬಂದು ನೀರು ಹಾಕಿ ಎಚ್ಚರಿಸಿದರು. ತುಸು ನೀರು ಕುಡಿಸಿ, ತನ್ನನ್ನು ತಬ್ಬಿಕೊಂಡು ಕಣ್ಣೀರು ಒರೆಸಿದರು. ಅಷ್ಟೊತ್ತಿಗೆ ಕೆಲವು ಗಂಡಸರು ಬಂದು ಘಟನೆ ನಡೆದ ಸ್ಥಳಕ್ಕೆ ಹೋದರು. ಮುಂದೆ ಪೋಲಿಸರು ಬರುವ ತನಕ ತಾನು ರಸ್ತೆಯ ಅಂಚಿನಲ್ಲಿಯೇ ಹೆಂಗಸರೊಂದಿಗೆ ಕುಳಿತಿದ್ದೆ. ತನಗೆ ಆಘಾತವಾಗಿದ್ದು ಹೆಚ್ಚಿಗೆ ಏನೂ ಕೇಳಬೇಡಿ'.

ಅನಸವ್ವ ಮತ್ತು ದೇವಪ್ಪರನ್ನು ಸಹ ದಸ್ತಗಿರಿ ಮಾಡಿದ್ದರು. ಆದರೆ ದುಂಡಪ್ಪಕಾಕಾ ಬೈಲಹೊಂಗಲದ ಪ್ರಸಿದ್ಧ ಅಂಗಡಿ ವಕೀಲರನ್ನು ಹಿಡಿದು ಅನಸೂಯಾ ಮತ್ತು ದೇವಪ್ಪರಿಗೆ ಒಂದು ವಾರದಲ್ಲಿ ಜಾಮೀನು ದೊರಕಿಸುವಲ್ಲಿ ಯಶಸ್ವಿಯಾಗಿದ್ದ. ಪೋಲಿಸರಿಗೂ ತಿಂಗಳುಗಟ್ಟಲೆ ಇದರ ಚೌಕಾಸಿ ಮಾಡುವುದು ಬೇಸರ ತರಿಸಿತು. ಅವರಿಗೆ ಬಸ್‌ಸ್ಟ್ಯಾಂಡಿನ ಪಕ್ಕದಲ್ಲಿಯೆ ಇದ್ದ ರೈತರ ಕೃಷಿ ಸೊಸೈಟಿಯಲ್ಲಿ ಚಹಾ ಮತ್ತು ಫಳಾರದ ವ್ಯವಸ್ಥೆ ಮಾಡಲಾಗುತ್ತಿತ್ತು. ಹೆಸರಿಗೆ ಚಹಾ ಮತ್ತು ಚುಮ್ಮರಿ. ಆದರೆ ಅಲ್ಲಿಗೆ ಜವಾರಿ ಕೋಳಿ, ನಾಲ್ಕು ಪದರಿನ ಚಪಾತಿ, ಬೈಲಹೊಂಗಲದಿಂದ ತರಿಸಿದ ಮದ್ಯದ ಬಾಟಲಿ ಸರಬರಾಜು ಆಗುತ್ತಿವೆಯೆನ್ನುವ ಸುದ್ದಿ ಇತ್ತು. ಎಷ್ಟೇ ಸಮಾರಾಧನೆ ಮಾಡಿದರೂ ಎಷ್ಟೇ ದೈನ್ಯತೆಯಿಂದ ಬೇಡಿಕೊಂಡರೂ ಪೋಲಿಸರಿಗೆ ಕರುಣೆಯೆ ಇರುವುದಿಲ್ಲವೇನೋ ಎನ್ನುವಂತೆ ಅವರು ಮತ್ತೆ ಅವರಿವರನ್ನು ಠಾಣೆಗೆ ಕರೆಸಿ ವಿಚಾರಿಸುವರು. ಜೀಪಿನಲ್ಲಿ ಹೊಂಗಲಕ್ಕೆ ಕರೆದೊಯ್ಯುವರು.



'ಈ ಪೋಲಿಸರು ಹೆಬ್ಬಾವಿನಂಗ ಊರು ಸುತ್ತಿಕೊಳ್ಳೋ ಮೊದಲು ಹೆಂಗಾದ್ರೂ ಮಾಡಿ ಇಲ್ಲಿಂದ ಸಾಗಹಾಕ್ರಿ. ಖರ್ಚು ಎಲ್ಲಾರೂ ಸೇರಿ ಭರಿಸೋಣಂತ.' ದುಂಡಪ್ಪಕಾಕಾ ಮತ್ತು ಶಿವಪುತ್ರಕಾಕಾರನ್ನು ಅನೇಕರು ಭೆಟ್ಟಿಯಾಗತೊಡಗಿದರು. ಸುಭಾಸ ಕಂಡಕ್ಟರ್ ಹೊಟೇಲಿಗೆ ಆಗಮಿಸುವುದು, ನಿರ್ಗಮಿಸುವುದು ಇದ್ದಿದ್ದೆ. ಬಸ್ಸು ಮಲ್ಲೂರಿಗೆ ವೇಳಾಪಟ್ಟಿಯ ಪ್ರಕಾರ ಬಂದು ಹೋಗುತ್ತಿತ್ತು. ಆದರೆ ಕಂಡಕ್ಟರ್ ಹೊಟೇಲಿಗೆ ವೇಳಾಪಟ್ಟಿ ತಪ್ಪಿಸಿ ಬರುತ್ತಾನೆ ಎನ್ನುವ ಮಾತಿತ್ತು. ಬಸ್ಸಿನ ಒಂದು ವೇಳಾಪಟ್ಟಿ ಇದ್ದರೆ ಇವನ ಬೈಕಿಗೆ ಮತ್ತೊಂದು ವೇಳಾಪಟ್ಟಿ ಇದ್ದಿತು! ಊರಿಗೆ ಬಸ್ಸು ಸುರುವಾದಾಗಿನಿಂದ ಆತ ಮಲ್ಲೂರಿಗೆ ಬರುತ್ತಿದ್ದರೂ ಹೊಟೇಲ್ ಮೇಲಿನ ಅವನ ಒಲವು ಮಾತ್ರ ಇತ್ತೀಚೆಗೆ ಹುಟ್ಟಿರುವಂತಹುದು. 'ಚಾದಂಗಡಿ ಎತ್ತರ ಮ್ಯಾಲಿದ್ರೂ ಚಾಲಕನಿಗೆ ಹೇಳಿ ತನಗೆ ಹತ್ತಲಿಕ್ಕೆ, ಇಳಿಯಲಿಕ್ಕೆ ಅನುಕೂಲ ಆಗ್ಲಿ ಅಂತ ಕಂಡಕ್ಟರ್ ಎಷ್ಟು ಇಳುಕುಲು ಬೇಕೊ ಅಷ್ಟು ಇಳುಕುಲು ಮಾಡಿಕೊಂಡಾನ ಕಾಣ್ತದ. ಬಸ್‌ಸ್ಟ್ಯಾಂಡ್‌ದಾಗ ಬಸ್ ನಿಲ್ಲಿಸಿರತಾರ. ಮತ್ತ್ ಹೊಟೇಲ್ ಮುಂದೆ ನಿಲ್ಲಿಸೋದು ಆಶ್ಚರ್ಯ ಅಲ್ಲೇನು?' ಒಳಗಿನ ಮಾತುಗಳು ಒಳಗೆಯೇ ಉಳಿಯುತ್ತಿದ್ದವು.

'ಚಾ ಕುಡಿಯೋವು ಇದ್ರ ಚಾ ಕುಡೀರಿ. ಐದು ನಿಮಿಷ ಟೈಮ್ ಐತಿ ನೋಡ್ರಿ.' ಸುಭಾಸ ಸ್ವಲ್ಪ ಜೋರಾಗಿಯೆ ಹೇಳಿ ಇಳಿಯುವನು. ಐದು ನಿಮಿಷ ಅಂತ ಹೇಳಿದ್ದರೂ ಕಂಡಕ್ಟರ್ ಮತ್ತು ಡ್ರೈವರ್ ತಿರುಗಿ ಬರಬೇಕಾದರೆ ಕನಿಷ್ಠ ಅರ್ಧ ತಾಸಾದಾರೂ ಆಗಿರುತ್ತಿತ್ತು. 'ಬಸ್ಸು ಸ್ವಲ್ಪ ಚಾದಂಗಡಿ ಕಡೆ ಬಾಗಿ ನಿಂತಿರ್ತದ. ನೋಡಿರಿಲ್ಲೊ?' ಕೆಲವರ ತಮಾಷೆ ಮುಂದೆ ಎಷ್ಟೊಂದು ನಿಜವಾಯಿತು. ಚಾದಂಗಡಿ ವಾಲಿತೊ? ಕಂಡಕ್ಟರ್ ವಾಲಿದನೋ? ಅಂತೂ ಇಂತೂ ಬಾಂಧವ್ಯದ ಸೇತುವೆಯೊಂದು ಅಲ್ಲಿ ನಿರ್ಮಾಣವಾಯಿತು. ಡ್ಯೂಟಿ ಮೇಲೆ ಇದ್ದಾಗಲೂ ಆಯಿತು. ಸೂಟಿ ಇದ್ದ ದಿನಗಳಲ್ಲಿ ಬೈಕ್ ಮೇಲೆ ಬರುವುದೂ ಆಯಿತು. ಒಟ್ಟಿನಲ್ಲಿ ಕಂಡಕ್ಟರ್ ಪದೇ ಪದೇ ಕಾಣಿಸಿಕೊಳ್ಳುವುದು ಹೊಟೇಲ್ ಮೇಲಿನ ಒಲವಿಗೊ ಅಥವಾ ಅನಸೂಯೆ ಮೇಲಿನ ಒಲವಿಗೋ ಎಂದು ಕೆಲವರು ಮುಗುಮ್ಮಾಗಿ ಕೇಳುವರು.

'ಅನಸೂಯಾಳೇ ಈಗ ಬಸ್ ಕಂಟ್ರೋಲರ್!' ಹಲವರಿಗೆ ಗುಮಾನಿ. ಶಂಕೆಗಳೇನು ಇರುತ್ತವೆ! ಆದರೆ ಇಬ್ಬರು ಮಕ್ಕಳಿರುವ, ಸುಖೀ ಸಂಸಾರ ಹೊಂದಿರುವ ಆಕೆ ಅವನಿಗೆ ಮೋಹಿತಳಾಗಿರುವ ಸಾಧ್ಯತೆ ಕಡಿಮೆಯೆಂದು ಕೆಲವರ ಅನಿಸಿಕೆ. ಪ್ರೇಮವ್ಯವಹಾರದ ಖಾತೆಕಿರ್ದಿ ತಿಳಿಯಲು ಅನೇಕರು ಯತ್ನ ನಡೆಸಿದ್ದರು. ದುರ್ಗನಿಂದ ಮಾಹಿತಿ ತೆಗೆಯುವುದು ಸುಲಭದ ಕೆಲಸವೆಂದು ಅವನನ್ನು ಆಶ್ರಯಿಸಿಕೊಂಡವರಿಗೆ ನಿರಾಶೆಯಾಯಿತು. ಬಾತ್ಮಿ ತಿಳಿಯುವ ಮುನ್ನವೇ ಕೊಲೆ ನಡೆದಿದೆ! ಮೊನ್ನೆ ಮೊನ್ನೆ ಬಂದುಹೋಗಿದ್ದ ಸುಭಾಸ ಮತ್ತೆ ಅಷ್ಟು ಬೇಗ ಬರುವ ಅವಶ್ಯಕತೆಯೇನಿತ್ತು? ಅವನು ಆ ದಿನವೆ ಸಾಲ ವಸೂಲಿ ಇಟ್ಟುಕೊಳ್ಳಬೇಕೆ? ಕಿಸೆಯಲ್ಲಿನ ಪಾಕೀಟು ಡೈರಿ ತೆಗೆದು ತನಗೆ ಎದುರು ಬಂದವರ ಹೆಸರು ನೋಡಿ ಅವರ ಅಸಲು ಬಡ್ಡಿ ಎಷ್ಟೆಂದು ಹೇಳುತ್ತಿದ್ದ. ಅಸಲು ರಕಮಿನ ವಸೂಲಿ ಯಾವಾಗಲೂ ಕಷ್ಟದ ಮಾತು. ಅಸಲು ಕೇಳದಿರಲೆಂದು ಬಡ್ಡಿ ತೆಗೆದು ಕೊಡುವರು. 'ಏಯ್ ಮಾರಾಯ, ಎಂತಹ ಕಷ್ಟದಾಗ ಬಂದಿಯಲ್ಲಪ್ಪ. ಅಸಲು ಹಂಗೇ ಇರ್ಲಿ. ಬಡ್ಡಿ ತಗೋ. ಮುಂದೆ ನೋಡೋಣು. ನಿನ್ನ ಸಾಲ ಮರೆತಿರತೇವಿ. ಧುತ್ತಂತ ಎದುರಾಗ್ಬಿಪಾ.' ದುರ್ಗನು ಸಹ ಹಾಗೆ ಬಡ್ಡಿ ಕೊಟ್ಟಿದ್ದರೆ ನಡೆಯುತ್ತಿತ್ತು. ಯಾಕೆ ಅವನನ್ನು ಎದುರು ಹಾಕಿಕೊಂಡನೋ ತಿಳಿಯದು. ಅವರ ನಡುವಿನ ಸಂಭಾಷಣೆ ಏನೆಂದು ತಿಳಿಯದು. ಏನು ಮಾತಾಡಿದರು? ಮರ್ಮಕ್ಕೆ ಹತ್ತುವಂತಹ ಮಾತುಗಳು ಏನಿದ್ದವು? ಯಾವ ರಹಸ್ಯ ಹೊರಬೀಳುವುದಿತ್ತು? ಸುಭಾಸನಿಂದ ಅಸಲು, ಬಡ್ಡಿ ಎರಡನ್ನೂ ಮುಳುಗಿಸಬೇಕೆಂದುಕೊಂಡನೋ? ಸುಭಾಸನಿಗೆ ಏನೋ ಅಂದಿರಬೇಕು. ಸಿಟ್ಟು ತಡೆಯದೆ ಸುಭಾಸ ತನ್ನ ಸಾಲ ತೀರಿಸಿ ಮುಂದಿನ ಹೆಜ್ಜೆಯಿಡು ಎಂದಿರಬೇಕು.

ಜನರು ಆಗಿಂದಾಗ ತಮ್ಮಷ್ಟಕ್ಕೆ ತಾವು ಯೋಚಿಸುತ್ತಿದ್ದ ಒಂದು ಸಂಗತಿಯೆಂದರೆ ಕಂಡಕ್ಟರ್ ಅಷ್ಟು ರಾಜಾರೋಷವಾಗಿ ಬಡ್ಡಿ ವ್ಯವಹಾರ ಮಾಡುತ್ತಿದ್ದುದು. ಅವನಿಗೆ ಹೇಳುವವರು, ಕೇಳುವವರು ಯಾರೂ ಇರಲಿಲ್ಲವೆ? ನೂರಾರು ಮಂದಿಗೆ ಸಾಲ ಕೊಡುವಷ್ಟು ಅವನ ಗಳಿಕೆಯಿದೆಯೇ? ನೂರಾರು ಜನ ಕಂಡಕ್ಟರ್‌ಗಳಿದ್ದಾರೆ. ಅವರೆಲ್ಲರಿಗೂ ಇಲ್ಲದ ಬಂಡವಾಳ ಮತ್ತು ಧೈರ್ಯ ಇವನಿಗೆ ಹೇಗೆ ಬರುತ್ತದೆ? ಅಂದರೆ ಅವನಿಗೆ ಈ ಊರ ಹಿರಿಯರ, ಪಂಚಾಯಿತಿಯವರ, ಅವನ ಆಫೀಸಿನವರ ಬೆಂಬಲ ಪರೋಕ್ಷವಾಗಿಯಾದರೂ ಇದ್ದಿರಬೇಕು. ಇಲ್ಲವೆ ಅವನು ನೇಯ್ದ ಬಲೆಯಲ್ಲಿ ಇವರೆಲ್ಲ ಸಿಕ್ಕಿಹಾಕಿಕೊಂಡಿರಬೇಕು. ಎಲ್ಲರೊಡನೆ ಸಲುಗೆಯಿಂದ ಬೆರೆಯುವ ನೈಪುಣ್ಯತೆ ಬೇರೆ ಅವನಿಗೆ. ಸಾಲ ಹಂಚಿಕೆ ಮತ್ತು ವಸೂಲಿಯನ್ನು ಅವನಷ್ಟು ತ್ವರಿತವಾಗಿ ಮಾಡುವವರೆ ಇದ್ದಿರಲಿಲ್ಲವೆನ್ನಬಹುದು. ಸುಭಾಸನ ಇನ್ನೊಂದು ವೈಶಿಷ್ಟ್ಯವೆಂದರೆ ಇವನು ಆ ರೀತಿಯ ಹಣದ ವ್ಯವಹಾರ ಮಾಡುತ್ತಾನೆ ಎನ್ನುವುದೆ ಬಹಳ ಮಂದಿಗೆ ಗೊತ್ತಿರಲಿಲ್ಲ. ಗೊತ್ತು ಮಾಡಲು ಇವನು ಆಸ್ಪದ ಕೊಡಲಾರ. ಅಷ್ಟು ತ್ವರಿತವಾಗಿ, ಮಜಬೂತಾಗಿ ಮತ್ತು ನಿಗೂಢವಾಗಿ ತನ್ನ ಕಾರ್ಯ ನೆರವೇರಿಸುವನು.

ಸಾಲ ಕೊಟ್ಟಿದ್ದನ್ನು ಯಾರಿಗೂ ಹೇಳಕೂಡದು ಎನ್ನುವ ಕರಾರು ಬೇರೆ. ಇವನು ಯಾವಾಗ ಕೊಡುತ್ತಾನೋ, ಯಾವಾಗ ಮರಳಿ ಪಡೆಯುತ್ತಾನೋ ಒಂದೂ ತಿಳಿಯುವುದಿಲ್ಲ.